ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟಕ್ಕೆ ಆದ ಖರ್ಚು ಮತ್ತು ಅದರಲ್ಲಿ ಭೂಸ್ವಾಧೀನ ಮತ್ತು ಪುನರ್‌ವಸತಿಗಳಿಗೆ ಆದ ಖರ್ಚುಗಳ ವಿವರಗಳು ಈ ರೀತಿ ಇವೆ.—

(ಲಕ್ಷ ರೂ.ಗಳಲ್ಲಿ)

	೧೯೮೦–೮೧	೧೯೮೧–೮೨	೧೯೮೨–೮೩	೧೯೮೩–೮೪	೧೯೮೪–೮೫
೧. ಯೋಜನೆಯಂ ಒಟ್ಟಿಗೆ ವೆಚ್ಚ.	೪೦೧೯	೪೪೭೮	೪೦೮೪	೪೯೧೦	೪೧೩೫
೨. ಅದರಲ್ಲಿ ಭೂ ಸ್ವಾಧೀನ ಮತ್ತು ಪುನರ್‌ವಸತಿಗೆ ಆದ ವೆಚ್ಚ (ಬಾಗಲ ಕೋಟೆ ಪುನರ್‌ವಸತಿ ಸೇರಿ)	೬೫೪.೧೨	೫೭೦.೩೦	೬೫೪.೮೦	೮೦೧.೩೩	೬೭೪.೮೬

	೧೯೮೫–೮೬	೧೯೮೬–೮೭	೧೯೮೭–೮೮	ಒಟ್ಟಿಗೆ
			(ಡಿಸೆಂಬರ್ ೧೯೮೭ರ ವರೆಗೆ)	
೧.	೪೬೨೨	೫೩೬೩	೨೭೯೮	೩೩೯೦೫
೨.	೧೦೨೨.೭೪	೧೧೯೯.೦೨	೩೪೪.೮೯	೫೮೨೭.೦೬

ಇ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟವನ್ನು ೧೯೫೫–೬೮ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಗುಳೇದಗುಡ್ಡ ಭಾಗಕ್ಕೆ ಪ್ರತ್ಯೇಕ ಶಿಕ್ಷಣಾಧಿಕಾರಿ ವಲಯ ಸ್ಥಾಪಿಸುವ ಬಗ್ಗೆ

೯೮. ಶ್ರೀ ನಂಜಯ್ಯನಮಂಠ. (ಗುಳೇದಗುಡ್ಡ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಳೇದಗುಡ್ಡ ಭಾಗಕ್ಕೆ ಪ್ರತ್ಯೇಕವಾದ ಶಿಕ್ಷಣಾಧಿಕಾರಿ ವಲಯವನ್ನು ಸ್ಥಾಪಿಸುವ ಯೋಜನೆ ಇದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ತೋಟಗಾರಿಕೆ ಫಾರಂನ್ನು ಪ್ರಾರಂಭಿಸುವ ಬಗ್ಗೆ

೧೦೧ ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ).— ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ತೋಟಗಾರಿಕೆ ಫಾರಂನ್ನು ಪ್ರಾರಂಭಿಸುವ ಯೋಜನೆ ಸರ್ಕಾರದಲ್ಲಿದೆಯೆ ?

ಆ) ಹಾಗಿದ್ದಲ್ಲಿ ಎಲ್ಲೆಲ್ಲಿ ಪ್ರಾರಂಭಿಸಿವ ಇಚ್ಛೆ ಹಾಗೂ ಯಾವ ವರ್ಷದಿಂದ ಪ್ರಾರಂಭಿಸಲಾಗುವುದು ?

ಶ್ರೀ ವೈ. ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಇದೆ.

ಆ) ಸೂಕ್ತವಾದ ಭೂಮಿಯನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ. ಅದು ದೊರಕಿದ ನಂತರ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕೃಷಿ ಇಲಾಖೆಯಲ್ಲಿ ಹುದ್ದೆಗಳ ಭರ್ತಿ ಬಗ್ಗೆ

೩೨೭. ಶ್ರೀ ಗೋಪಾಲ ಮುಕುಂದಕಾನಡೆ (ಸಿರ್ಸಿ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆಯಲ್ಲಿರುವ ವಿವಿಧ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಖಾಲಿ ಇರುವ ವಿವಿಧ ಹುದ್ದೆಗಳೆಷ್ಟು ?

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಈ) ಭಡ್ತಿ ನೀಡದೆ ಖಾಲಿ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು ?

ಉ) ಭಡ್ತಿ ನೀಡುವ ಸಂದರ್ಭದಲ್ಲಿ ಹರಿಜನ ಗಿರಿಜನರಿಗೆ ಆದ್ಯತೆ ನೀಡಿ ಭಡ್ತಿ ನೀಡಿದ ಹುದ್ದೆಗಳ ಸಂಖ್ಯೆ ಎಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ೧೫,೮೨೭.

ಆ) ೧,೦೫೨.

ಇ) ಹೌದು.

ಈ) ೧೬೪.

ಉ) ೩೫೨ (ಹರಿಜನರಿಗೆ ೩೧೦, ಗಿರಿಜನರಿಗೆ ೪೨.)

ಹೆಗ್ಗಡದೇವನಕೋಟೆ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಟ್ಟುವ ಬಗ್ಗೆ

೬೧. ಶ್ರೀ ಎಂ. ಶಿವಣ್ಣನವರು (ಹೆಚ್. ಡಿ. ಕೋಟೆ).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆಚ್. ಡಿ. ಕೋಟೆಯಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಕಟ್ಟಡ ಕಟ್ಟಲು ಭೂಮಿ ವಶಪಡಿಸಿಕೊಳ್ಳಲಾಗಿದೆಯೇ ?

ಇ) ವಶಪಡಿಸಿಕೊಂಡಿದ್ದಲ್ಲಿ, ಯಾವ ಸ್ಥಳದಲ್ಲಿ ಹಾಗೂ ಎಷ್ಟು ಭೂಮಿ ವಶಪಡಿಸಿಕೊಳ್ಳಲಾಗಿದೆ?

ಈ) ಕಟ್ಟಡವನ್ನು ಯಾವಾಗ ನಿರ್ಮಿಸಿ ಪೂರ್ಣಗೊಳಿಸಲಾಗುವುದು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ವಶಪಡಿಸಿಕೊಳ್ಳಲು ಕ್ರಮ ತೆಗೆದುಕೊಂಡಿದೆ.